ಸಾಕ್ಷಿ ಯನ್ನು ದಿಃ 04.12.2024 ರಂದು  ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ  ಎದುರುದಾರರ ಪರ ವಕೀಲರಿಂದ</u>**

1. ನನ್ನ ಹಾಗೂ ಎದುರುದಾರರ ಮದುವೆ ಸಂಪ್ರದಾಯ ಪ್ರಕಾರ ಆಗಿರುತ್ತದೆ.
2. ಎದುರುದಾರರಿಗೆ ಉಡುಗೊರೆಯಾಗಿ ಚಿನ್ನ ನೀಡಿದ ಬಗ್ಗೆ ತೋರಿಸಲು ದಾಖಲೆಗಳನ್ನು ಹಾಜರುಪಡಿಸಿಲ್ಲ.
3. ಎದುರುದಾರಿಗೆ ವರದಕ್ಷಿಣೆ ನೀಡಿದ್ದನ್ನು ನೋಡಿದವರು ಇದ್ದಾರೆ. ಅವರನ್ನು ಸಾಕ್ಷಿ ಮಾಡಿಸಲು ಯಾವುದೇ ತೊಂದರೆ ಇರುವುದಿಲ್ಲ.
4. ನಮ್ಮ ತಂದೆಗೆ ಬಂದ ಆಸ್ತಿಗಳನ್ನು ನಾವು ಭಾಗ ಮಾಡಿಕೊಂಡಿಲ್ಲ. ನಮ್ಮ ತಂದೆ ಹೆಸರಿನಲ್ಲಿ 24 ಗುಂಟೆ ಜಮೀನು ಇದೆ.
5. ನಾನು ಬಿ.ಕಾಂ ಪದವೀಧರೆ. ಆ ಕಾರಣಕ್ಕೆ ನಿಮಗೆ ಕೆಲಸಕ್ಕೆ ಹೋಗಲು ಅವಕಾಶ ಇವೆ ಎಂದರೆ, ಇದೆ, ಆದರೆ ನಮ್ಮ ಮನೆಯಲ್ಲಿ ಕಳಿಸುವುದಿಲ್ಲ ಎಂದು ನುಡಿಯುತ್ತಾರೆ.
6. ನಾನು ಯಾವುದಾದರೂ ಖಾಸಗಿ ಕೆಲಸಕ್ಕೆ ಸೇರಿಕೊಂಡರೆ ತಿಂಗಳಿಗೆ ಕನಿಷ್ಟ  15 ಸಾವಿರ ಸಂಬಳ ಬರುತ್ತದೆ ಎಂದರೆ, ನನಗೆ ಗೊತ್ತಿಲ್ಲ.
7. ಕೆಲಸಕ್ಕೆ ಸೇರಿಕೊಂಡು ನನಗೆ ನನ್ನನ್ನು ಹಾಗೂ ನನ್ನ ಮಗುವನ್ನು ನೋಡಿಕೊಳ್ಳಲು ಸಾಧ್ಯವಿದೆ ಎಂದರೆ, ಸಾಧ್ಯವಿಲ್ಲ ಎಂದು ನುಡಿಯುತ್ತಾರೆ.
8. ಎದುರುದಾರರು 3 ಜನ ಸಹೋದರರು ಹಾಗೂ ಅವರಿಗೆ 3 ಜನ ಸಹೋದರಿಯವರು ಇರುತ್ತಾರೆ. ಅವರಿಗೆ ವಯಸ್ಸಾದ ತಂದೆ - ತಾಯಿ ಇದ್ದಾರೆ ಎಂದರೆ, ಇದ್ದಾರೆ, ಆದರೆ ಅವರು ಬೇರೆ ಇದ್ದಾರೆ ಎಂದು ನುಡಿಯುತ್ತಾರೆ.
9. ಎದುರುದಾರಿಗೆ ಅವರ ತಂದೆ ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ಇದೆ ಎಂದರೆ ಸರಿ.
10. ಎದುರುದಾರರ ತಂದೆ ತಾಯಿಗಳನ್ನು ಈಗ ಎದುರುದಾರರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ, ಇಲ್ಲ ಅವರು ಬೆಂಗಳೂರಿನಲ್ಲಿ ಕೆಲಸ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಅವರ ತಂದೆ ತಾಯಿಗಳನ್ನು ಈಗ ಯಾರೂ ನೋಡಿಕೊಳ್ಳುತ್ತಿಲ್ಲ, ಅವರೇ ಬೇರೆ ವಾಸವಿದ್ದಾರೆ ಎಂದು ನುಡಿಯುತ್ತಾರೆ.

11. ಎದುರುದಾರರ ಕೆಲಸಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ.
12. ಎದುರುದಾರರು ಯಾವುದೇ ಕೆಲಸ ಮಾಡುತ್ತಿಲ್ಲ, ಅವರ ತಂದೆ ತಾಯಿಯನ್ನು ನೋಡಿಕೊಂಡು ಹೊನ್ನೇನಹಳ್ಳಿಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ.
13. ಎದುರುದಾರರ ಹುಟ್ಟೂರು ಹೊನ್ನೇನಹಳ್ಳಿಯಲ್ಲಿ ನಿಮಗೆ ಜೀವನ ಮಾಡಲು ಇಷ್ಟವಿಲ್ಲ, ಬೆಂಗಳೂರಿನಲ್ಲಿ ವಾಸವಿರಲು ಇಷ್ಟಪಡುತ್ತಿರಾ ಎಂದರೆ, ಇಲ್ಲ ನಾನು ನನ್ನ ಯಜಮಾನರು ಹೊನ್ನೇನಹಳ್ಳಿಯಲ್ಲಿ ಬಂದು ವಾಸವಿದ್ದರೆ, ಅವರ ಜೊತೆ ವಾಸವಿರುತ್ತೇನೆ ಎಂದು ನುಡಿಯುತ್ತಾರೆ.
14. ನಿಶ್ಚಿತಾರ್ತದ ಸಮಯದಲ್ಲಿ ಎದುರುದಾರರು ನಿಮಗೆ ನೀಡಿದ 50 ಸಾವಿರಗಳನ್ನು ನೀವು ಅವರಿಗೆ ವಾಪಸ್ ನೀಡಿಲ್ಲ ಎಂದರೆ, ಅವರು ನಮಗೆ ಯಾವುದೇ ಹಣ ನೀಡಿಲ್ಲ ಎಂದು ನುಡಿಯುತ್ತಾರೆ.
15. ನಿಮ್ಮ ಮದುವೆಯ ಖರ್ಚನ್ನು ಎದುರುದಾರರೇ ನೋಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.
16. ನಿಮ್ಮ ಬಳಿ ಸ್ಮಾರ್ಟ್ ಫೋನ್ ಇದೆ ಎಂದರೆ, ಮಗು ಇದ್ದ ಕಾರಣ, ನಾನು ಈಗ ಮೊಬೈಲ್ ಉಪಯೋಗಿಸುತ್ತಿಲ್ಲ ಎಂದು ನುಡಿಯುತ್ತಾರೆ. ಮೊದಲು ಉಪಯೋಗಿಸುತ್ತಿದ್ದೆ.
17. ನಿಮ್ಮ ಹೆಸರಿನಲ್ಲಿ ಇನ್ಸಟಾಗ್ರಾಂ ಹಾಗೂ ಫೇಸ್ ಬುಕ್ ಖಾತೆ ಇವೆ ಎಂದರೆ, ಫೇಸ್ ಬುಕ್ ಮಾತ್ರ ಹೊಂದಿದ್ದೇನೆ ಎಂದು ನುಡಿಯುತ್ತಾರೆ. ವಾಟ್ಸಪ್ ಖಾತೆ ಸಹ ಇದೆ.
18. ನೀವು ಎದುರುದಾರರ ಜೊತೆ ಅಲ್ಲದೇ, ಬೇರೆಯವರೊಂದಿಗೆ ಸಾಮಾಜಿಕ ಜಾಲತಾಣಗಳಲ್ಲಿ ಸಂಪರ್ಕದಲ್ಲಿ ಇದ್ದೀರಾ ಎಂದರೆ ಸರಿಯಲ್ಲ.
19. ನೀವು ಹೊರಗಡೆ ಸುತ್ತುವ ಆಸೆಯಿಂದ ಮತ್ತು ಬೇರೆ ಬೇರೆ ಹೊಸ ಬಟ್ಟೆ ತೆಗೆದುಕೊಳ್ಳುವ ಆಸೆಯಿಂದ ಎದುರುದಾರರೊಂದಿಗೆ ಆಗಾಗ ಜಗಳ ಕಾಯುತ್ತಿದ್ದೀರಾ ಎಂದರೆ ಸರಿಯಲ್ಲ.
20. ನಾನು ನಮ್ಮ ಮದುವೆಗೆ ಖರ್ಚು ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ.

21. ಎದುರುದಾರರ ತಂದೆಯ ಹೆಸರು ಚಂದ್ರಾಚಾರಿ, ತಾಯಿಯ ಹೆಸರು ರಾಜಮ್ಮ. ನನ್ನ ಮಾವನವರ ತಂದೆಯ ಹೆಸರು ನನಗೆ ಗೊತ್ತಿಲ್ಲ.
22. ನೀವು ಹಾಜರುಪಡಿಸಿರುವ ನಿಪಿ - 5 ರಿಂದ 8ರ ಪಹಣಿಗಳು ಎದುರುದಾರರ ಕುಟುಂಬಕ್ಕೆ ಸಂಬಂಧಪಟ್ಟಿದ್ದವಲ್ಲ ಎಂದರೆ ಸರಿಯಲ್ಲ.
23. ನಿಪಿ - 8 ರ ಪಹಣಿಯಲ್ಲಿ ಚಂದ್ರಾಚಾರಿ ಎಂಬ ಹೆಸರಿಲ್ಲ, ರವಿ ಎಂಬ ಹೆಸರು ಇದೆ ಎಂದರೆ, ಅದು ಎದುರುದಾರರ ಅಣ್ಣ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದಂತೆ ನನ್ನ ಉಕ್ತಲೇಖದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಒ

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ